OS No.61/2021 PW-1

**<u>ದಿನಾಂಕ 15.09.2025 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ 1 ರಿಂದ 5ನೇ ಪ್ರತಿವಾದಿಯವರ ಪರ ಶ್ರೀ ಎಸಿಸಿ ವಕೀಲರಿಂದಃ</u>**

ನನ್ನ ತಾಯಿ 1993 ರಲ್ಲಿ ಮರಣ ಹೊಂದಿರುತ್ತಾರೆ. ನನ್ನ ತಾಯಿಯ ತಂದೆಯ ಹೆಸರು ಚನ್ನೇಗೌಡ ಅಲಿಯಾಸ್ ಚನ್ನಪ್ಪ. ಅವರಿಗೆ 4 ಜನ ಮಕ್ಕಳು. ಅವರ ಹೆಸರು ಬಿ.ಸಿ ಚನ್ನಪ್ಪ, ನಾರಾಯಣಗೌಡ, ಲಿಂಗಮ್ಮ, ಶಿವಲಿಂಗೇಗೌಡ ಅಲಿಯಾಸ್ ಶಿವಲಿಂಗಯ್ಯ.

2. ಬಿ.ಸಿ ಚನ್ನಪ್ಪರವರು ಯಾವಾಗ ತೀರಿಕೊಂಡರು ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ನಾನು ಬೈರಾಪಟ್ಟಣದಲ್ಲಿ ವಾಸವಿಲ್ಲ ಎಂದು ನುಡಿಯುತ್ತಾರೆ. ನಾರಾಯಣಗೌಡ 3 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ಶಿವಲಿಂಗೇಗೌಡ 35 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ನನ್ನ ತಾಯಿ ಮತ್ತು ಆತನ ಸಹೋದರರ ನಡುವೆ ಆದ ವ್ಯವಹಾರಗಳ ಬಗ್ಗೆ ಗೊತ್ತಿದೆ. ನನ್ನ ತಾಯಿ ಮತ್ತು ಆತನ ಸಹೋದರರು 50 ವರ್ಷಗಳ ಹಿಂದೆ ವಿಭಾಗ ಮಾಡಿಕೊಂಡಿರುತ್ತಾರೆಂದರೆ ಸುಳ್ಳು. ನನ್ನ ತಾಯಿ ಯಾವುದೇ ದಾವಾ ಹಾಕಿಲ್ಲ. ಚನ್ನಪ್ಪ ರವರ ಮಕ್ಕಳ ನಡುವೆ 50 ವರ್ಷಗಳ ಹಿಂದೆ ವಿಭಾಗ ಮಾಡಿಕೊಂಡು ಅವರವರು ಸ್ವಾ ದೀನದಲ್ಲಿದ್ದಾರೆಂದರೆ ಸುಳ್ಳು.

3. 1 ಮತ್ತು 2 ನೇ ವಾದಿಗಳ ತಂದೆ ಶಿವಲಿಂಗೇಗೌಡರವರು ದಿಃ21.06.1973 ರಲ್ಲಿ ದಾವಾ ಆಸ್ತಿ ಐಟಂ ನಂಬರ್ 1 ಅನ್ನು ಬಿ ಸಿ ಚನ್ನಪ್ಪ ರವರಿಗೆ ಮಾರಾಟ ಮಾಡಿರುತ್ತಾರೆಂದರೆ ಸುಳ್ಳು. 1973 ರಲ್ಲಿ 1 ಮತ್ತು 2 ನೇ ವಾದಿಗಳು ಜನನವಾಗಿರಲಿಲ್ಲ ಎಂದರೆ ನಿಜ. ದಾವಾ ಆಸ್ತಿ ಐಟಂ ನಂಬರ್ 1 ಕ್ಕೆ ಸಂಬಂದಪಟ್ಟಂತೆ 1ನೇ ಪ್ರತಿವಾದಿಯು ದಾವಾ ಸಂಖ್ಯೆ 29/2006 ಅನ್ನು ಸಲ್ಲಿಸಿದ್ದರು ಎಂದರೆ ನಿಜ. ಈ ದಾವಾ 1ನೇ ಪ್ರತಿವಾದಿಯ ಪರವಾಗಿ ಡಿಕ್ರಿಯಾಯಿತು ಎಂದರೆ ನಿಜ. ಈ ದಾವಾ ವಿರುದ್ದ ಆರ್ ಎ 23/2012 ಅನ್ನು ಸಲ್ಲಿಸಿದ್ದರು ಎಂದರೆ ನಿಜ. ಸದರಿ ಮೇಲ್ಮನವಿ ವಜಾ ಆಯಿತು ಎಂದರೆ ನಿಜ.

4. ದಾವಾ ಐಟಂ ನಂಬರ್ 2 ಅನ್ನು 1 ನೇ ಪ್ರತಿವಾದಿಯ ಗಂಡ ದಿಃ07.09.1993 ರಂದು ಸ್ವಂತ ದುಡಿಮೆಯಿಂದ ಖರೀದಿ ಮಾಡಿದ್ದರು ಎಂದರೆ ಸುಳ್ಳು. ಈ ಪ್ರಕಾರ 1ನೇ ಪ್ರತಿವಾದಿಯ ಗಂಡ ಮತ್ತು ಆತನ ಮಕ್ಕಳು ಖಾತೆ ಮುಂದುವರೆಸಿಕೊಂಡು ಹೋಗುತ್ತಿದ್ದಾರೆಂದರೆ ಸಾಕ್ಷಿಯು ಯಾವುದೇ ಭಾಗ ಕೊಡದೇ ಹೋಗುತ್ತಿದ್ದಾರೆಂದು ನುಡಿಯುತ್ತಾರೆ.

5. ದಾವಾ ಐಟಂ ನಂಬರ್ 3 ರಲ್ಲಿ 10 ಗುಂಟೆ ಜಮೀನನ್ನು ದಿಃ09.03.1987ರಲ್ಲಿ 1 ನೇ ಪ್ರತಿವಾದಿಯ ಗಂಡ ಕ್ರಯಕ್ಕೆ ಪಡೆದುಕೊಂಡಿದ್ದರು ಎಂದರೆ ಸಾಕ್ಷಿಯು ಒಟ್ಟು ಕುಟುಂಬದ ಆದಾಯದಿಂದ ಪಡೆದಿದ್ದರು ಎಂದು ನುಡಿಯುತ್ತಾರೆ. ಉಳಿದ 6 ಗುಂಟೆ ಜಮೀನನ್ನು 1 ನೇ ಪ್ರತಿವಾದಿಯ ಗಂಡ ವೆಂಕಟೇಗೌಡರವರಿಂದ ಕ್ರಯಕ್ಕೆ ತೆಗೆದುಕೊಂಡಿದ್ದರು ಎಂದರೆ ಸಾಕ್ಷಿಯು ಒಟ್ಟು ಕುಟುಂಬದ ಆದಾಯದಿಂದ ಪಡೆದಿದ್ದರು ಎಂದು ನುಡಿಯುತ್ತಾರೆ.

6. ದಾವಾ ಐಟಂ ನಂಬರ್ 4 ಅನ್ನು 1 ನೇ ಪ್ರತಿವಾದಿಯ ಗಂಡ ದಿಃ 22.05.1995 ರಲ್ಲಿ ಕ್ರಯಕ್ಕೆ ಪಡೆದುಕೊಂಡಿದ್ದರು ಎಂದರೆ ಸಾಕ್ಷಿಯು ಒಟ್ಟು ಕುಟುಂಬದ ಆದಾಯದಿಂದ ಪಡೆದಿದ್ದರು ಎಂದು ನುಡಿಯುತ್ತಾರೆ.

7. ದಾವಾ ಐಟಂ ನಂಬರ್ 5 ರಲ್ಲಿ 1 ನೇ ಪ್ರತಿವಾದಿಯ ಗಂಡನಿಗೆ 21 ಗುಂಟೆ ಭಾಗದಲ್ಲಿ ಬಂದಿತ್ತು ಎಂದರೆ ಸುಳ್ಳು. ಅದೇ ರೀತಿ 6 ರಿಂದ 8 ನೇ ಪ್ರತಿವಾದಿಯ ತಂದೆಯಾದ ನಾರಾಯಣಗೌಡ ರವರಿಗೆ 21 ಗುಂಟೆ ಭಾಗದಲ್ಲಿ ಬಂದಿತ್ತು ಎಂದರೆ ಸುಳ್ಳು. 1 ಮತ್ತು 2ನೇ ವಾದಿಯವರ ತಂದೆ ಶಿವಲೀಂಗೌಡರವರಿಗೆ 21 ಗುಂಟೆ ಭಾಗದಲ್ಲಿ ಬಂದಿತ್ತು ಎಂದರೆ ಸುಳ್ಳು. ನನ್ನ ತಾಯಿಗೂ ಸಹ ಇದೇ ಆಸ್ತಿಯಲ್ಲಿ 20 ಗುಂಟೆ ಭಾಗದಲ್ಲಿ ಬಂದಿತ್ತು ಎಂದರೆ ಸುಳ್ಳು.

8. ದಾವಾ ಐಟಂ ನಂಬರ್ 5 ರಲ್ಲಿ 21 ಗುಂಟೆಯನ್ನು 1 ಮತ್ತು 2ನೇ ವಾದಿಯವರ ತಂದೆ ಶಿವಲೀಂಗೌಡರವರು 1ನೇ ಪ್ರತಿವಾದಿಯ ಗಂಡನಿಗೆ ದಿಃ28.07.1978 ರಂದು ಕ್ರಯಕ್ಕೆ ಕೊಟ್ಟಿದ್ದರು ಎಂದರೆ ಸುಳ್ಳು. ಈ ಪ್ರಕಾರ ಖಾತಾ ಆಗಿ ಅನುಭೋಗದಲ್ಲಿದ್ದಾರೆಂದರೆ ಸಾಕ್ಷಿಯು ಹೌದು ಆದರೆ ಯಾವುದೇ ಭಾಗ ಕೊಟ್ಟಿಲ್ಲ ಎಂದು ನುಡಿಯುತ್ತಾರೆ.

9. ದಾವಾ ಐಟಂ ನಂಬರ್ 5 ರಲ್ಲಿ 21 ಗುಂಟೆಯನ್ನು ನಾರಾಯಣಗೌಡರವರು 1ನೇ ಪ್ರತಿವಾದಿಯ ಗಂಡನಿಗೆ ದಿಃ25.08.1980 ರಂದು ಕ್ರಯಕ್ಕೆ ಕೊಟ್ಟಿದ್ದರು

ಎಂದರೆ ಸುಳ್ಳು. ದಾವಾ ಐಟಂ ನಂಬರ್ 5 ಸಂಪೂರ್ಣ 1ನೇ ಪ್ರತಿವಾದಿಯ ಗಂಡ ಚನ್ನಪ್ಪರವರಿಗೆ ಸೇರಿದ್ದು ಎಂದರೆ ಸುಳ್ಳು. ಅವರೇ ಅನುಭೋಗದಲ್ಲಿದ್ದಾರೆಂದರೆ ಸಾಕ್ಷಿಯು ಹೌದು ಆದರೆ ಯಾವುದೇ ಭಾಗ ಕೊಟ್ಟಿಲ್ಲ ಎಂದು ನುಡಿಯುತ್ತಾರೆ.

10. ದಾವಾ ಐಟಂ ನಂಬರ್ 5 ರಲ್ಲಿ 20 ಗುಂಟೆಯನ್ನು ನನ್ನ ತಾಯಿಯು ವೆಂಕಟೇಶ್ ರವರಿಗೆ ದಿಃ02.11.1977 ರಂದು ಮಾರಾಟ ಮಾಡಿದ್ದರೆಂದರೆ ನಿಜ. ಸಾಕ್ಷಿಯು ಮುಂದುವರೆದು ಅದು ಪಿತ್ರಾರ್ಜಿತ ಆಸ್ತಿ ಅಲ್ಲ ಎಂದು ನುಡಿಯುತ್ತಾರೆ. ವ್ಯಯಕ್ತಿಕ ಕಾರಣಕ್ಕಾಗಿ ಮಾರಾಟ ಮಾಡಿದ್ದಾರೆ ಶಿವಲಿಂಗೇಗೌಡರವರು ಬರೆಸಿರುತ್ತಾರೆಂದರೆ ಸುಳ್ಳು. ನಾರಾಯಣಗೌಡರವರು ಜಮೀನು ಮಾರಾಟ ಮಾಡಿ ಕೀಲಾರದಲ್ಲಿ ಜಮೀನು ಪಡೆದಿದ್ದಾರೆಂದರೆ ಸುಳ್ಳು. ಕೀಲಾರದ ಜಮೀನನ್ನು ದಾವಾದಲ್ಲಿ ಸೇರಿಸಿಲ್ಲ ಎಂದರೆ ನಿಜ. ಶಿವಲಿಂಗೇಗೌಡರವರಿಗೆ ಇಬ್ಬರು ಹೆಂಡತಿಯರು ಎಂದರೆ ನಿಜ. 2ನೇ ಹೆಂಡತಿಯ ಹೆಸರು ಸಾವಿತ್ರಮ್ಮ ಎಂದರೆ ನಿಜ. ಅವರಿಗೆ ಶಿವಲಿಂಗ ಎನ್ನುವ ಮಗ ಇದ್ದ ಎಂದರೆ ನಿಜ. ಈ ವಿಷಯವನ್ನು ದಾವಾದಲ್ಲಿ ತಿಳಿಸಿಲ್ಲ ಎಂದರೆ ನಿಜ. ವಂಶವೃಕ್ಷವನ್ನು ಅನುಕೂಲಕ್ಕೆ ತಕ್ಕಂತೆ ಸೃಷ್ಟಿ ಮಾಡಿರುತ್ತೇನೆಂದರೆ ಸುಳ್ಳು.

ಸಮಯಾವಕಾಶ ಕೋರಿದ್ದು ಮುಂದುವರೆದ ಪಾಟೀಸವಾಲಿಗಾಗಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

**(ವೆಂಕಟೇಶಪ್ಪ. ವಿ)**
**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**